# 1ನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ಸಂಖ್ಯೆ: 667-2025**

ಪಿರ್ಯಾದಿದಾರರು ಃ ಸರ್ಕಾರದ ಪರವಾಗಿ ಕುಂದಾಪುರ ಗ್ರಾಮಾಂತರ ಠಾಣಾ ಪೊಲೀಸರು

-ವಿರುದ್ಧ-

ಆರೋಪಿ ಃ 1. ರಾಜೇಶ ಶೇರುಗಾರ,
2. ರಾಘವೇಂದ್ರ ಶೇರುಗಾರ,

**ಮುಂದುವರೆದ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆಃ 1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?

ಉತ್ತರಃ 1. 2.

ಪ್ರಶ್ನೆಃ 2. ಪ್ರಾಸಾ 3: ಡಾ. ಶ್ರೀಕೃಷ್ಣಾನಂದ ಸಾಗರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 17-03-2025 ರಂದು ಬೆಳಿಗ್ಗೆ 9.00 ಗಂಟೆಗೆ ಪ್ರಾ.ಸಾ.1ರವರು ದಿಃ 15-03-2025 ರಂದು ಹಲ್ಲೆಯಾದ ಹಿನ್ನೆಲೆಯಲ್ಲಿ ತಮ್ಮ ಆಸ್ಪತ್ರೆಗೆ ದಾಖಲಾಗಿದ್ದು, ಅವರನ್ನು ಪರೀಕ್ಷಿಸಲಾಗಿ 1. ಬೆನ್ನಿನ ಕೆಳ ಹಿಂಭಾಗದಲ್ಲಿ ಮುಟ್ಟಿದರೆ ನೋವು ಕಂಡು ಬಂದಿರುತ್ತದೆ. 2. ಬಲಕಾಲಿನಲ್ಲಿ ನೋವು ಕಂಡು ಬಂದಿರುತ್ತದೆ. ತನ್ನ ಅಭಿಪ್ರಾಯದಲ್ಲಿ ಮೇಲಿನ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು ಈ ಕುರಿತು ತಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು. ಸದ್ರಿ ದಾಖಲೆಯನ್ನು ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 1. 2.

ಪ್ರಶ್ನೆಃ 3. ಪ್ರಾಸಾ 6: ಶ್ರೀಮತಿ ಯಶೋಧ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 17-03-2025 ರಂದು ಸಂಜೆ 6.30 ಗಂಟೆಗೆ ಕುಂದಾಪುರ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ 7-30 ರವರೆಗೂ ಒಳರೋಗಿಯಾಗಿ ದಾಖಲಾಗಿದ್ದ ಚಾ.ಸಾ.1 ರವರು ನೀಡಿದ ಲಿಖಿತ ಪಿರ್ಯಾದನ್ನು ಪಡೆದುಕೊಂಡು ರಾತ್ರಿ 8-15 ಗಂಟೆಗೆ ಠಾಣೆಗೆ ಹಾಜರಾಗಿ ಅದನ್ನು ಚಾಸಾ-11 ರವರಿಗೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ನಿಪಿ-1 ರಲ್ಲಿ ತನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 1. 2.

ಪ್ರಶ್ನೆಃ 4. ಪ್ರಾಸಾ 7: ಸೂರ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪಿ ಎಸ್ ಐ ರವರು ನೀಡಿದ ಮೌಖಿಕ ಸೂಚನೆಯಂತೆ ದಿಃ 19-03-2025 ರಂದು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಪಂಚನಾಮೆಯನ್ನು ಸಂಜೆ 5-20 ರಿಂದ 6.00 ಗಂಟೆವರೆಗೆ ತಯಾರಿಸಿದ್ದು. ಆ ವೇಳೆಗೆ ವೀಡಿಯೋ ಚಿತ್ರೀಕರಣ ಮಾಡಿದ್ದು. ಸಾಕ್ಷಿದಾರರಾದ ಚಾಸಾ-2 ರಿಂದ 5 ರವರ ಹೇಳಿಕೆ, ಚಾಸಾ-1 ರವರ ಮರುಹೇಳಿಕೆಗಳನ್ನು ಪಡೆದಿದ್ದು. ದಿಃ 27.03.2024 ರಂದು ಆರೋಪಿತರನ್ನು ದಸ್ತಗಿರಿ ಮಾಡಿ ನಿಯಮ ಪಾಲಿಸಿರುತ್ತೇನೆ. ದಿಃ 02-05-2024 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರ ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿ ನಿಪಿ-2 ಮತ್ತು 6 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2(ಡಿ) ಮತ್ತು 6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 1. 2.

ಪ್ರಶ್ನೆಃ 5. ಪ್ರಾಸಾ 8: ರಾಘವೇಂದ್ರ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 17-03-2025 ರಂದು ರಾತ್ರಿ 8-15 ಗಂಟೆ ಸಮಯಕ್ಕೆ ಠಾಣಾ ಪ್ರಭಾರದಲ್ಲಿರುವಾಗ ಚಾಸಾ-10 ರವರು ಠಾಣೆಗೆ ಹಾಜರಾಗಿ ಚಾಸಾ-1 ರವರಿಂದ ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಪಡೆದ ಲಿಖಿತ ದೂರನ್ನು ಹಾಜರುಪಡಿಸಿದ್ದು ಅದನ್ನು ಪಡೆದು ಠಾಣಾ ಅಪರಾಧ ಕ್ರಮಾಂಕ 17/2025 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸದ್ರಿ ದೂರನ್ನು ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-8 ಎಂದು, ಅದರಲ್ಲಿನ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-12 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ 1. 2.

ಪ್ರಶ್ನೆಃ 9. ನಿಮಗೆ ಹೆಚ್ಚಿಗೆ ಹೇಳುವುದು ಏನಾದರೂ ಇದೆಯಾ?

ಉತ್ತರಃ 1. 2.

ಪ್ರಶ್ನೆಃ 10: ನಿಮ್ಮ ಪರವಾಗಿ ಸಾಕ್ಷಿಗಳಿದ್ದಾರ?

ಉತ್ತರಃ 1. 2.

ಮೇಲ್ಕಂಡ ಹೇಳಿಕೆಯನ್ನು ಆರೋಪಿ ನುಡಿದ ಶಬ್ದಗಳಲ್ಲಿಯೇ ದಾಖಲಿಸಿದ್ದು ಅದು ನಿಜ ಹಾಗೂ ಸತ್ಯಾಂಶಗಳಿಂದ ಕೂಡಿರುವುದಾಗಿ ಪ್ರಮಾಣೀಕರಿಸಿದೆ.

ದಿ. 17.02.2026.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.